॥ ಶ್ರೀ ॥

ಮೂಲಯುಕ್ತ

ಕನ್ನಡ

ಭಜಗೋವಿಂದ.

ಅನುವಾದಕ ಪ್ರಕಾಶಕ

ಶ್ರೀ ಮುಳ್ಳುಂಕರ ಕುಮಾರ ಕವಿ.
ಪೊಳಲಿ, ದಕ್ಷಿಣ. ಕನ್ನಡ.

1916.

FIRST EDITOIN
COPIES 1000.

ಬಂಟ್ವಾಳ ವಿಕ್ಟೋರಿಯಾ ಮುದ್ರಾಶಾಲೆಯಲ್ಲಿ
ಬಿ. ಕೃಷ್ಣಪ್ರಭುಗಳಿಂದ ಮುದ್ರಿಸಲ್ಪಟ್ಟಿತು.

ಬೆಲೆ: ೧ಆಣೆ.

ವರ್ಷಕ್ಕೆ ಚಂದಾ: ರೂ ೧||, ಕ್ರೌನ್ ಅಷ್ಟಪತ್ರ 3

ಹೊಸ ಮಾಸಪತ್ರಿಕೆ

ಪ್ರಸಂಗ

ಮಾ

ಪ್ರಾಚೀನವಾದ ಪುರಾಣೇತಿಹಾಸಗಳಲ್ಲಿ ನಿರೂಪಿಸಲ್ಪಟ್ಟ
ಳನ್ನು ಪಂಡಿತಪಾಮರರುಗಳಿಗೂ ಮನೋರಂಜಕವಾದ ರೀ
ವಾಗಿ, ಗದ್ಯಪದ್ಯಗಳನೊಡಗೂಡಿದ ಕನ್ನಡಭಾಷೆಯಲ್ಲಿ
ಪ್ರಚುರಿಸಲ್ಪಟ್ಟ; ಹಾಗೂ, ಈಗಣ ಸ್ಥಿತಿಗತಿಗಳಿಗೆ ಅನ
ದಂಥ ವಿಶೇಷ ನವೀನ ಕಥೆಗಳ ಆಧಾರದಿಂದ ನವೀನರೀತ್ಯಾ
ಯಕ್ಷಗಾನ ಪ್ರಸಂಗಗಳನ್ನೇ ಕ್ಲಪ್ತವಾದ ಕಾಲದಲ್ಲಿ ಉ
ಪ್ರಕಟೀಕರಿಸಲು, ಈ ಹೊಸ ಮಾಸಪತ್ರಿಕೆಯು ಉದ್ದೇಶವಾ
ಪುರುಷಾರ್ಥಸಾಧನೆಗೆ ಅತ್ಯುಪಯುಕ್ತವಾದುದಾಗಿಯೂ ಸ
ಮನೋರಂಜನೆಯನ್ನು ಮಾಡತಕ್ಕದಾಗಿಯೂ ಇರುವ ಈ
ಕೆಗೆ ಕನ್ನಡಿಗರು ಪ್ರೋತ್ಸಾಹವೀಯಲೆಂದು ಪ್ರಾರ್ಥನೆ.

ಪ್ರಕಟಣೆಯು ಪ್ರಾರಂಭ: ೫೦೦ ಚಂದಾದಾರರ ಹೆ
ರಿಜಿಸ್ಟರಾದೊಡನೆ.

ವಿಳಾಸ:—

ಪ್ರಕಾಶಕ: "ಪ್ರಸಂಗ" ಪೊಳಲಿ ದ

ಮೂಲಯುಕ್ತ ಕನ್ನಡ

ಭಜಗೋವಿಂದ.

ಅನುವಾದಕ. ಪ್ರಕಾಶಕ.

ಶ್ರೀಮಜ್ಛಂಕರ ಕುಮಾರ ಕವಿ.

ಪೊಳಲಿ, ದ. ಕ.

1916.

ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ. ದ. ಕ

ಬೆಲೆ: ೧ ಆಣೆ:

ಪೀಠಿಕೆ.

ಶಂಕರ ದೇವರ್ಕಳ ಸನ್ನುತಿಸಿ |
ಶಂಕರ ಭಗವತ್ಪದರಡಿ ಸೆನಸಿ|
ಶಂಕರ ಮಂಜರಿ ಯನು ಕನ್ನಡಿಸಿ |
ಶಂಕರ ನುಡಿಸಿದೊಲೆಂಬೆ ವಿವರಿಸಿ ‖ ೧ ‖
ದಿಗುವಿಜಯಕೆ ಪೊರಟಾ ಶ್ರೀಶಂಕರ |
ಭಗವತ್ಪಾದಾಚಾರ್ಯ ನಿರಂತರ |
ಡುಗುರೀಕರಣವ ನೋದುವ ಪಂಡಿತ |
ಗೊಗುಮಿಗೆ ದಯದಿಂತೊರೆದನು ಖಂಡಿತ





V. P. WORKS BANTWAL.

ವಿಜ್ಞಾಪನೆ.

ಈ ಪುಸ್ತಕಗಳು ವಿಕ್ರಯಿಸಿ ಬಂದ
ಮೊಬಲಗು ಪೊಳಲಿ ವಿದ್ಯಾ
ವರ್ಧಕ ಸಮಾಜಕ್ಕೆ
ಕೊಡಲ್ಪಡುವದು.
ಈಕೃತಿಯನ್ನು
ವಿದ್ಯಾಭಿಮಾನಿಗಳು
ಪ್ರೋತ್ಸಾಹಿಸುವರಾಗಿ
ನಂಬುವ ಸಜ್ಜನ ಸದ್ವಿಧೇಯ
ಎಸ್. ಪಿ. ಹೇರ್ಳೆ.

|| ಶ್ರೀಶಾರದಾಂಬಾಯೈನಮಃ ||

ಸಂಸ್ಕೃತ

ಶ್ರೀ ಗೋವಿಂದ

ದ್ವಾದಶಮಂಜರಿಕಾ ಸ್ತೋತ್ರಂ

ಭಜ ಗೋವಿಂದಂ ಭಜ ಗೋವಿಂದಂ |
ಭಜ ಗೋವಿಂದಂ ಮೂಢಮತೇ ||
ಸಂಪ್ರಾಪ್ತೇ ಸನ್ನಿಹಿತೇ ಕಾಲೇ
ನಹಿ ನಹಿ ರಕ್ಷತಿ ಡುಕೃಞ್ಕರಣೇ || ಧ್ರುವಪದಂ ||

ಮೂಢ ಜಹೀಹಿ ಧನಾಗಮತೃಷ್ಣಾಂ |
ಕುರು ಸದ್ಬುದ್ಧಿಂ ಮನಸಿ ವಿತೃಷ್ಣಾಂ ||
ಯಲ್ಲಭಸೇ ನಿಜಕರ್ಮೋಪಾತ್ತಂ |
ವಿತ್ತಂ ತೇನ ವಿನೋದಯ ಚಿತ್ತಂ || ೧ ||

ನಾರೀಸ್ತನಭರ ನಾಭಿನಿವೇಶಂ |
ದೃಷ್ಟ್ವಾ ಮಾಗಾ ಮೋಹಾವೇಶಂ ||
ಏತನ್ಮಾಂಸವಸಾದಿ ವಿಕಾರಂ |
ಮನಸಿ ವಿಚಿಂತಯ ವಾರಂ ವಾರಂ || ೨ ||

॥ ಶ್ರೀರಾಜರಾಜೇಶ್ವರಿಯೈನಮಃ ॥

ಕನ್ನಡ
ಶ್ರೀ ಗೋವಿಂದ
ದ್ವಾದಶಮಂಜರಿಕೆಸ್ತೋತ್ರವು

ಗೋವಿಂದನ ನೆನೆ ಗೋವಿಂದನ ನೆನೆ |
ಗೋವಿಂದನ ನೆನೆ ಮತಿಹೀನ ||
ಸಾವಸಮಯ ಬರಲಾಕಾಲದಿ ನಿಜ |
ಕಾವದಲ್ಲ ಡುಕುರಿಂಕರಣ ॥ ಪಲ್ಲವಿ ॥
ಮೂಢನೆ ಬಿಡು ಹಣ ಕೂಡ್ವತ್ಯಾಶ |
ಮಾಡು ಸುಬುದ್ಧಿ ಹೃದಯದಭ್ಯಾಸ ||
ಕೂಡು ಕುಲಾಚಾರದಿ ದೊರೆತ ಧನ |
ನೋಡುತ ಸಂತೋಷಿಸುತಿಹುದದನ ॥ ೧ ॥
ಹೆಂಗಳ ಗುರುಕುಚ ಪೊಕ್ಕುಳ ಬಳಿಯಂ |
ಪಿಂಗದಿರೀಕ್ಷಿಸಿ ಮನಗಲಿಬಿಲಿಯಂ ||
ಕಂಗೊಳಿಸದು ಮಾಂಸದ ಕುಟಿಲಗಳು |
ಭಂಗಿಸಿದರ ಯೋಚನೆ ಚಿತ್ತದೊಳು ॥ ೨ ॥

ನಳಿನೀದಳಗತ ಜಲಮತಿ ತರಳಂ |
ತದ್ವಜ್ಜೀವಿತ ಮತಿಶಯ ಚಪಲಂ ||
ವಿದ್ಧಿ ವ್ಯಾಧ್ಯಭಿಮಾನ ಗ್ರಸ್ತಂ |
ಲೋಕಂ ಶೋಕಹತಂ ಚ ಸಮಸ್ತಂ || ೩ ||

ಯಾವದ್ವಿತ್ತೋಪಾರ್ಜನ ಸಕ್ತ |
ಸ್ತಾವನ್ನಿಜ ಪರಿವಾರೋರಕ್ತಃ ||
ಪಶ್ಚಾಜ್ಜೀವತಿ ಜರ್ಝರ ದೇಹೇ |
ವಾರ್ತಾಂ ಕೋಪಿ ನ ಪೃಚ್ಛತಿ ಗೇಹೇ || ೪ ||

ಯಾವತ್ಪವನೋ ನಿವಸತಿ ದೇಹೇ |
ತಾವತ್ಪೃಚ್ಛತಿ ಕುಶಲಂ ಗೇಹೇ ||
ಗತವತಿ ವಾಯೌ ದೇಹಾಪಾಯೇ |
ಭಾರ್ಯಾ ಬಿಭ್ಯತಿ ತಸ್ಮಿನ್ ಕಾಯೇ || ೫ ||

ಅರ್ಥ ಮನರ್ಥಂ ಭಾವಯ ನಿತ್ಯಂ |
ನಾಸ್ತಿ ತತಸ್ಸುಖ ಲೇಶಸ್ಸತ್ಯಂ ||
ಪುತ್ರಾದಪಿ ಧನ ಭಾಜಾಂ ಭೀತಿಃ |
ಸ್ಸರ್ವತ್ರೈಷಾ ವಿಹಿತಾ ರೀತಿಃ || ೬ ||

ತಾವರೆಯೆಲೆ ನೀರತಿ ತಳಮಳವು ।
ಜೀವಿತವಾಪರಿ ತಿಳಿ ಚಂಚಲವು ॥
ಭೂವಲಯದಿ ಮದ ರೋಗ ವ್ಯಸನದಿಂ ।
ಸಾವುತಿಹುದು ಜೀವಿಗಳನುದಿನದಿಂ ॥ ೩ ॥
ದುಡಿದಿಡುತಿಹ ಕಾಲದಿ ನಿಜಬಳಗ ।
ಪೊಡಮಡುತತಿ ಪ್ರೀತಿಸುವರು ಕಡೆಗಾ ॥
ನಡುಗುತಿರುವ ಮುದಿಕಾಲವು ಬರಲು ।
ನುಡಿಸರು ಸುಖದುಃಖಗಳ ಮನೆಯೊಳು ॥ ೪ ॥
ವಾಯು ಶರೀರದೊಳಿರುವಷ್ಟುದಿನ ।
ಕಾಯುತಿಹರು ಪರಿವಾರಗಳವನ ॥
ಕಾಯುವ ಗಾಳಿ ತೊಲಗಲದ ಕಂಡು ।
ಪ್ರಿಯದರಸಿ ಮುಟ್ಟಳು ಭಯಗೊಂಡು ॥ ೫ ॥
ರೊಖ್ಖದಿ ದುಃಖ ನಿರಂತರ ನೋಡು ।
ಸಿಕ್ಕದು ಸುಖವಣು ನಿಶ್ಚಯಮಾಡು ॥
ಮಕ್ಕಳ ದೆಶೆಯಿಂದಲು ಧನಿಕನಿಗೆ ।
ದುಃಖವಿದನುಭವ ಸಕಲಾವನಿಗೆ ॥ ೬ ॥

ಬಾಲಸ್ತಾವತ್ಕ್ರೀಡಾಸಕ್ತ |
ಸ್ತರುಣಸ್ತಾವತ್ತರುಣೀಸಕ್ತಃ ||
ವೃದ್ಧಸ್ತಾವಚ್ಚಿಂತಾಸಕ್ತಃ |
ಪರೇಬ್ರಹ್ಮಣಿ ಕೋಽಪಿ ನ ಸಕ್ತಃ || ೭ ||

ಕಾ ತೇಕಾಂತಾ ಕಸ್ತೇಪುತ್ರ
ಸ್ಸಂಸಾರೋಽಯಮತೀವ ವಿಚಿತ್ರಃ ||
ಕಸ್ಯ ತ್ವಂ ವಾ ಕುತ ಆಯಾತಃ |
ತತ್ವಂ ಚಿಂತಯ ತದಿಹಭ್ರಾಂತಃ || ೮ ||

ಸತ್ಸಂಗತ್ವೇನಿಸ್ಸಂಗತ್ವಂ
ನಿಸ್ಸಂಗತ್ವೇ ನಿರ್ಮೋಹತ್ವಂ ||
ನಿರ್ಮೋಹತ್ವೇ ನಿಶ್ಚಲತತ್ವಂ |
ನಿಶ್ಚಲತತ್ವೇ ಜೀವನ್ಮುಕ್ತಿಃ || ೯ ||

ವಯಸಿ ಗತೇ ಕಃ ಕಾಮವಿಕಾರಃ |
ಶುಷ್ಕೇನೀರೇ ಕಃ ಕಾಸಾರಃ ||
ಕ್ಷೀಣೇವಿತ್ತೇ ಕಃ ಪರಿವಾರಃ |
ಜ್ಞಾತೇತತ್ವೇ ಕ ಸ್ಸಂಸಾರಃ || ೧೦ ||

ಸಣ್ಣವನಾಗಿರಲಾಟದಿ ಮನಸು |
ಹೆಣ್ಣೊಳಿಷ್ಟ ಯೌವನದೊಳು ಬಿರಿಸು ||
ಹಣ್ಣುಮುದುಕನಾಗಿರಲತಿಚಿಂತೆ |
ಬಿನ್ನಿನಸುತ್ತಿಹ ಪರಗತಿ ಸಂತೆ || ೭ |
ಯಾವಳು ನಿನ್ನರಸಿಯು ಸುತನಾರು |
ಯಾವಲ್ಲಿಂದೈದಿದೆ ನೀನಾರು ||
ಈವಿಧ ದಿಂ ಬಳಗಚ್ಚರಿ ನಿಚ್ಚ |
ಭಾವಿಸು ಪರಮಾರ್ಥವ ನೆಲೆಹುಚ್ಚ || ೮ ||
ಸಾಧುಗಳೊಡನಾಟದೊಳೇಕಾಂಗ |
ವಾದಪುದದರಿಂದಾಶಾಭಂಗ ||
ಛೇದಿಸಲಾಶೆಯಹುದು ಸುಜ್ಞಾನ |
ಸಾಧಿಪುದದರಿಂ ಮುಕ್ತಿಸ್ಥಾನ || ೯ ||
ಮೀರಲು ಪ್ರಾಯ ವದೆಲ್ಲಿ ಕುಶಾಲು |
ಆರಲು ನೀರಲ್ಲಿದೆ ಕೊಳ ಪೇಳು ||
ತೀರಲು ಹಣ ಪರಿವಾರಗಳೆಲ್ಲಿ |
ತೋರಲು ಸುಜ್ಞಾನವು ಮದವೆಲ್ಲಿ || ೧೦ ||

ಮಾ ಕುರು ಧನಜನ ಯೌವನಗರ್ವಂ ।
ಹರತಿ ನಿಮೇಷಾತ್ಕಾಲಸ್ಸರ್ವಂ ॥
ಮಾಯಾಮಯಮಿದ ಮಖಿಲಂ ಹಿತ್ವಾ ।
ಬ್ರಹ್ಮಪದತ್ವಂ ಪ್ರವಿಶ ವಿದಿತ್ವಾ ॥ ೧೧ ॥

ದಿನಯಾಮಿನ್ಯೌ ಸಾಯಂಪ್ರಾತಃ ।
ಶಿಶಿರವಸಂತೌ ಪುನರಾಯಾತಃ ॥
ಕಾಲಃ ಕ್ರೀಡತಿ ಗಚ್ಛತ್ಯಾಯು ।
ಸ್ತದಪಿ ನ ಮುಂಚತ್ಯಾಶಾವಾಯುಃ ॥ ೧೨ ॥

ದ್ವಾದಶಮಂಜರಿಕಾ ಭಿರಶೇಷಃ ।
ಕಥಿತೋ ವೈಯ್ಯಾಕರಣಸ್ಯೈಷಃ ।
ಉಪದೇಶೋಭೂದ್ವಿದ್ಯಾನಿಪುಣೈಃ ।
ಶ್ರೀಮಚ್ಛಂಕರ ಭಗವಚ್ಛರಣೈಃ ॥ ೧೩ ॥

ಇತಿ ದ್ವಾದಶಮಂಜರಿಕಾ ಸ್ತೋತ್ರಂ

ಸಂಪೂರ್ಣಂ

ಮಾಡದಿರ್ರೈ ಸಿರಿ ಜನ ಬಲಗೆಲ್ಲ |
ಕೀಡೀತರೆ ನಿಮಿಷದೊಳಗದೆಲ್ಲ ||
ನೋಡುವಿದೆಲ್ಲವು ಮಾಯಾಬಲವು |
ದೂಡದ ಕೂಡಾತ್ಮನೊಳದೆ ಗೆಲವು || ೧೧ ||
ನಡುಪಗಲಿರುಳು ದಯಾಸ್ತಮಯಗಳು |
ಎಡೆಬಿಡದಿಹ ಶಿಶಿರ ವಸಂತಗಳು ||
ಪಿಡಿದಾಡ್ವುದು ಸಮಯಾಯುಷಖಾಲೀ |
ಬಿಡದೀಪರಿಗು ದುರಾಶೆಯ ಗಾಳಿ || ೧೨ ||
ಪನ್ನೆರಡೀ ಮಂಜರಿಪದದೊಳು ವ್ಯಾ |
ಕರ್ಣಪರಿಶಿ ತನ್ನರಿಯದ ಭುವ್ಯಾ ||
ವರ್ಣಿಪಗಾತ್ಮ ವಿಚಾರದ ಪರ್ಯ |
ವರ್ಣಿಸಿದನು ಶಂಕರ ಗುರುವರ್ಯ || ೧೩ ||
ಈ ರೀತಿಯಿಂ ದ್ವಾದಶಮಂಜರಿಕೆ ಸ್ತೋತ್ರವು

ಮುಗಿದುದು.

ಚತುರ್ದಶ ಮಂಜರಿಕಾ ಸ್ತೋತ್ರಂ

ಪದ್ಮಪಾದಃ

ಕಾ ತೇಕಾಂತಾ ಧನಗತಚಿಂತಾ ।
ವಾತುಲಕಿಂ ತವ ನಾಸ್ತಿ ನಿಯಂತಾ ॥
ತ್ರಿಜಗತಿ ಸಜ್ಜನ ಸಂಗತಿರೇಕಾ ।
ಭವತಿ ಭವಾರ್ಣವ ತರಣೇನೌಕಾ ॥ ೧ ॥

ತಂತ್ರೋಟಕಃ

ಜಟಿಲೋಮುಂಡೀ ಲುಂಚಿತಕೇಶಃ ।
ಕಾಷಾಯಾಂಬರ ಬಹುಕೃತವೇಷಃ ॥
ಪಶ್ಯನ್ನಪಿ ಚ ನ ಪಶ್ಯತಿ ಮೂಢೋ
ಹ್ಯುದರನಿಮಿತ್ತಂ ಬಹುಕೃತವೇಷಃ ॥ ೨ ॥

ಹಸ್ತಾಮಲಕಃ

ಅಂಗಂ ಗಳಿತಂ ಫಲಿತಂ ಮುಂಡಂ ।
ದಶನವಿಹೀನಂ ಜಾತಂ ತುಂಡಂ ॥
ವೃದ್ಧೋಯಾತಿ ಗೃಹೀತ್ವಾ ದಂಡಂ ।
ತದಪಿ ನ ಮುಂಚತ್ಯಾಶಾಪಿಂಡಂ ॥ ೩ ॥

ಚತುರ್ದಶ ಮಂಜರಿಕೆ ಸ್ತೋತ್ರವು

ಪದ್ಮ ಪಾದ

ಕೇಳು ಹುಚ್ಚ ಧನದಾಶೆಯೊಳಿದ್ದಿ |
ಪೇಳುವರಿಲ್ಲವೆ ನಿನಗೆ ಸುಬುದ್ಧಿ ||
ಮೂಲೋಕದಿ ಸಾಧು ಜನರ ಜೋಡಿ |
ಮೇಲೆನಿಪುದು ಭವಕಡಲಿಂಗೋಡಿ || ೧ ||

ತಂತ್ರೋಟಕ

ಜಡೆತಲೆ ಯದ ಬೋಳಿಸಿ ಕತ್ತರಿಸಿ |
ಉಡುತಲಿ ಕೆಂಪತಿ ವೇಷವ ಧರಿಸಿ ||
ದೃಥ ಬೊಮ್ಮನ ನೋಡದೆ ಸಂದೇಹ |
ಪಡುವಗಿದೇ ಪೊಡೆಗೋಸುಗ ರೂಹ || || ೨

ಹಸ್ತಾಮಲಕ

ಕಾಯ ಸಡಲಿ ತಲೆ ಬಿಳಿದಾಗಿರಲು |
ಬಾಯೊಳಗಿನ ಫಲ್ಗಳು ಪೋಗಿರಲು ||
ಪ್ರಾಯವಿೂರಿ ದಡಿ ಪಿಡಿದು ನಡೆಯಲು |
ಕಾಯದಾಶೆ ಬಿಡದೈ ಜಗತಿಯೊಳು || ೩ ||

ಹಸ್ತಾಮಲಕಃ

ಅಗ್ರೇವಹ್ನಿಃ ಪೃಷ್ಠೇಭಾನೂ |
ರಾತ್ರೌ ಚುಬುಕ ಸಮರ್ಪಿತಜಾನುಃ |
ಕರತಲ ಭಿಕ್ಷಾ ತರು ತಲವಾಸ |
ಸ್ತದಪಿ ನ ಮುಂಚತ್ಯಾಶಾಪಾಶಃ || ೪ ||

ವಾರ್ತಿಕಕಾರಃ

ಕುರುತೇಗಂಗಾಸಾಗರ ಗಮನಂ |
ವ್ರತ ಪರಿಪಾಲನ ಮಥವಾ ದಾನಂ ||
ಜ್ಞಾನ ವಿಹೀನಸ್ಸರ್ವ ಮತೇನ |
ಮುಕ್ತಿಂ ನ ಭಜತಿ ಜನ್ಮಶತೇನ || ೫ ||

ನಿತ್ಯಾನಂದಃ

ಸುರಮಂದಿರ ತರುಮೂಲನಿವಾಸಃ |
ಶಯ್ಯಾ ಭೂತಲಮಜಿನಂ ವಾಸಃ ||
ಸರ್ವ ಪರಿಗ್ರಹ ಭೋಗತ್ಯಾಗಃ |
ಕಸ್ಯ ಸುಖಂ ನ ಕರೋತಿ ವಿರಾಗಃ || ೬ ||

ಹಸ್ತಾಮಲಕ

ಮುಂದಕಗ್ನಿ ಬೆಂಗಡೆಯಾದಿತ್ಯ |
ಸಂದಿಸಿ ರಾತ್ರಿಗಡ್ಡದಿ ಕಾಲ್ನಿತ್ಯ ||
ಮಂದಿರ ಮರದಡಿ ಕೂಳ್ಗಯ್ಯಲ್ಲಿ |
ಹಿಂದರು ಬಿಡದವನಾಶೆಯ ಬಳ್ಳಿ || ೪ ||

ವಾರ್ತಿಕಕಾರ

ಓಡಿ ಕಾಶಿ ರಾಮೇಶ್ವರ ಸ್ನಾನ |
ಮಾಡುತ ವ್ರತಗಳ ನಥವಾ ದಾನ ||
ನೀಡಲಿ ಪರಮಾರ್ಥವರಿಯದಿರಲು |
ನೋಡ ಮೋಕ್ಷ ವನ ನೂರ್ಜನ್ಮದೊಳು || ೫ ||

ನಿತ್ಯಾನಂದ

ಮರದಡಿ ಸ್ವರ್ಗ ವೆನುತ್ತಲ್ಲಿರುತ |
ಧರಿಸೆಲದಿ ಮಲಗಿ ಚರ್ಮವನುಡುತ ||
ಸರುವ ವಿಷಯಸುಖ ಬಿಡುತ ವಿರಾಗ |
ಧರಿಸಿದಡಾವನಿಗಾನಂದಾಗ ? || ೬ ||

ಆನಂದಗಿರಿಃ

ಯೋಗರತೋವಾ ಭೋಗರತೋವಾ |
ಸಂಗರತೋವಾ ಸಂಗವಿಹೀನಃ ||
ಯಸ್ಯ ಬ್ರಹ್ಮಣಿ ರಮತೇಚಿತ್ತಂ |
ನಂದತಿ ನಂದತಿ ನಂದತ್ಯೇವ ||೭||

ದೃಢಭಕ್ತಃ

ಭಗವದ್ಗೀತಾ ಕಿಂಚಿದಧೀತಾ |
ಗಂಗಾಜಲ ಲವ ಕಣಿಕಾ ಪೀತಾ ||
ಸಕೃದಪಿಯೇನ ಮುರಾರಿ ಸಮರ್ಚಾ |
ಕ್ರಿಯತೇತಸ್ಯ ಯಮೋಪಿ ನ ಚರ್ಚಾಂ ||೮||

ನಿತ್ಯನಾಥಃ

ಪುನರಪಿಜನನಂ ಪುನರಪಿಮರಣಂ |
ಪುನರಪಿ ಜನನೀ ಜಠರೇಶಯನಂ ||
ಇಹ ಸಂಸಾರೇ ಬಹು ದುಸ್ತಾರೇ |
ಕೃಪಯಾ ಪಾರೇಪಾಹಿ ಮುರಾರೇ ||೯||

ಆನಂದಗಿರಿ

ಗೈಯಲಿ ಯೋಗವನತಿ ಭೋಗಿಸಲಿ |
ಬೈಯಲಿ ಸಂಸಾರವ ಪ್ರೀತಿಸಲಿ ||
ಸೈಯೆನೆ ಪರಿಪೂರ್ಣದೊಳೊಡಗೂಡೆ |
ಮೈಯು ಮರಸುಗಾನಂದಕ್ಕೀಡೆ || ೭ ||

ದೃಢಭಕ್ತ

ಒಂದು ಪದಾರ್ಥವ ಗೀತದಿ ತಿಳಿದು |
ಬಿಂದು ಜಲಾದರು ಗಂಗೆಯು ಕುಡಿದು ||
ಎಂದಾದರು ಮುರವೈರಿಯು ಮನದಿ |
ವಂದಿಪನನ್ನೆ ಮುಕೇಳನು ದೃಢದಿ || ೮ ||

ನಿತ್ಯನಾಥ

ಎತ್ತಿ ಜನುಮ ಬಳಿಕತ್ತ ಸಾವದು |
ಮತ್ತೆ ತಾಯಬಸುರೊಳಗೆ ನಿಲ್ವದು ||
ಸುತ್ತೀ ಸಂಸಾರಾಂಬುಧಿಯಂತ |
ವೆತ್ತಿದೆಯೋ ಪೊರೆದಯದಿ ಮುರಾಂತ|| ೯ ||

ಯೋಗಾನಂದಃ

ರಥ್ಯಾಕರ್ಪಟ ವಿರಚಿತಕಂಥಃ |
ಪುಣ್ಯಾಪುಣ್ಯ ವಿವರ್ಜಿತಪಂಥಾಃ ||
ಯೋಗೀಯೋಗ ನಿಯೋಜಿತಚಿತ್ತೋ |
ರಮತೇಬಾಲೋನ್ಮತ್ತವ ದೇವ || ೧೦ ||

ಸುರೇಂದ್ರಃ

ಕಸ್ತ್ವಂ ಕೋಽಹಂ ಕುತಆಯಾತಃ |
ಕಾಮೇಜನನೀ ಕೋಮೇತಾತಃ ||
ಇತಿಪರಿಭಾವಿತ ನಿಜಸಂಸಾರ |
ಸ್ಸರ್ವಂತ್ಯಕ್ತ್ವಾ ಸ್ವಪ್ನವಿಚಾರಃ || ೧೧ ||

ಮೇಧಾತಿಥಿಃ

ತ್ವಯಿಮಯಿ ಸರ್ವತ್ರೈಕೋವಿಷ್ಣುಃ |
ವ್ಯರ್ಥಂ ಕುಪ್ಯಸಿ ಮಯ್ಯಸಹಿಷ್ಣುಃ ||
ಭವ ಸಮಚಿತ್ತ ಸ್ಸರ್ವತ್ರತ್ವಂ |
ವಾಂಛಸ್ಯ ಚಿರಾದ್ಯದಿ ವಿಷ್ಣುತ್ವಂ || ೧೨ ||

ಯೋಗಾನಂದ

ಬೇದಿಗೆಸದ ಚೂರರುವೆಗಳುಡುವ |
ಭೇದಾಭೇದಗಳಿಡದೆ ನಡೆಯುವ ||
ಐದು ವರುಷದೊಳಗಿನ ಮಗುವಿನೊಲು |
ಸಾಧಿಪವನಿಗಹದಾನಂದಗಳು || ೧೦ ||

ಸುರೇಂದ್ರ

ನೀಯಾರಾ ನಾರ್ಬಂಧ್ವಲ್ಲಿಂದ |
ತಾಯಾ ತಂದೆಗಳಾರೆಂಬಂದ ||
ಮಾಯದ ಕನಸೊಲೆನುತ್ತಾಗುಟ್ಟು |
ನ್ಯಾಯದಿ ತಿಳಿದು ಸುಖದಿರದ ಬಿಟ್ಟು || ೧೧ ||

ಮೇಧಾತಿಥಿ

ನಿನ್ನೊಳೆನ್ನೊಳೆಲ್ಲಾ ಭಾಗದಲು |
ಅನ್ಯರಿಲ್ಲ ಪರಮಾತ್ಮನ ಬದಲು ||
ಇನ್ನದ ತಿಳಿದಾದರು ಸರ್ವರಲಿ |
ಅನ್ಯೋನ್ಯದೊಳಿರು ಮುಕ್ತ್ಯಾಶೆಯಲಿ || ೧೨ ||

ಭಾರತೀವಂಶಃ

ಕಾಮಂ ಕ್ರೋಧಂ ಲೋಭಂ ಮೋಹಂ ।
ತ್ಯಕ್ತ್ವಾತ್ಮಾನಂ ಪಶ್ಯವಿಮೋಹಂ ॥
ಆತ್ಮ ಜ್ಞಾನವಿಹೀನಾ ಮೂಢಾ ।
ಸ್ತೇಪಚ್ಯಂತೆ ನರಕನಿಗೂಢಾಃ ॥ ೧೩ ॥

ಸುಮತಿಃ

ಗೇಯಂಗೀತಾ ನಾಮಸಹಸ್ರಂ ।
ಧ್ಯೇಯಂ ಶ್ರೀಪತಿರೂಪಮಜಸ್ರಂ ॥
ನೇಯಂ ಸಜ್ಜನಸಂಗತ ಮನಿಶಂ ।
ದೇಯಂದೀನ ಜನಾಯಚವಿತ್ತಂ ॥ ೧೪ ॥

ಮೂಢಃ ಕಶ್ಚನ ವೈಯ್ಯಾಕರಣೋ ।
ಡುಕೃ ಞ್ಕರಣಾಧ್ಯಯನ ಧುರೀಣಃ ॥
ಶ್ರೀಮಚ್ಛಂಕರ ಭಗವಚ್ಛಿಷ್ಯೈ ।
ಬೋಧಿತ ಆಸೀಚ್ಛೋಧಿತಕರಣಃ ॥ ೧೫ ॥

ಭಾರತೀವಂಶ

ಕಾಮ ಕ್ರೋಧ ಲೋಭಂಗಳ ದೂಡು |
ನೀಮನಸಿಡು ಪರಮಾತ್ಮನ ನೋಡು ||
ಪಾಮರರಾತ್ಮ ಜ್ಞಾನವರಿಯದೆ |
ಜೈಮಿನಿಯೊಳು ಸೇರುವರು ತಿಳಿಯದೆ || ೧೩ ||

ಸುಮತಿ

ಬಿಡದೆ ಗೀತಸಾಸಿರ ನಾಮ್ಜಪಿಸು |
ದೃಢ ಹೃದಯದಿ ಹರಿರೂಪವ ನಿಲಿಸು ||
ಪಡೆಯುತ್ತಿರು ಸಾಧುಜನರ ಜೋಡಿ |
ಕೊಡುತಿರು ಹಣವ ದರಿದ್ರರ ನೋಡಿ || ೧೪ ||
ವೇದಾಂತರಿಯದೆಡುಕುರು ಕರಣದ |
ವ್ರೋದಿನೊಳತಿ ಪಂಡಿತನೆನ್ನಿಸಿದ ||
ಭೂದೇವನ ಚಿತ್ತವ ಶುಚಿಗೈದರ್ |
ಬೋಧಿಸಿ ಶ್ರೀಗುರುಶಂಕರ ಶಿಷ್ಯರ್ || ೧೫ ||

Victoria Printing Works, Bantwal S. C.

ನೋಡಿರಿ! ಇದೀಗ!! ಸಮಯ!!!

ಆಮೂಲಾಗ್ರವಾಗಿ ತದ್ರೂಪ ಕನ್ನಡಿಸಿದಂತೆಯೇ
ಸದ್ರಿ ಶಂಕರ ಕುಮಾರ ಕವಿ (ಎಸ್.ಪಿ. ಹೇರ್ಳೆ)
ಯಿಂದ ದೇಶಭಾಷೆಗೆ ಪರಿವರ್ತಿಸಿದ

ತುಳು ಭಜಗೋವಿಂದ

ಪುಸ್ತಕವು ಬಂದಾಣೆ ಚೀಟು ರವಾನಿಸಿದ
ವಾಚಕರ ಅವಗಾಹನೆ ಬಗ್ಯೆ ನಮ್ಮ ಖರ್ಚಿನಿಂದಲೇ
ಕಳುಹಿಸಿಕೊಡುವೆವು.

ವಿಳಾಸ:—

ಭಜಗೋವಿಂದ ಬುಕ್ ಡಿಪೊ,
ಪೊಳಲಿ,
ದಕ್ಷಿಣ ಕನ್ನಡ. [1

ಭೋ ಸ್ವದೇಶ ವತ್ಸಲ ಮಹನೀಯರೇ

ನವರಸಾಧ್ಯಲಂಕಾರಸಾದುಕ್ತಿ ಯುಕ್ತ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬೋಧಿಸುತ್ತಾ ಆನಂದವನ್ನೀಯುವ ಶ್ರೀಯುತ ಮೂಲ್ಕಿ ಶ್ರೀನಿವಾಸ ಹರಿದಾಸರಿಂದ ರಚಿಸಲ್ಪಟ್ಟು ಬಿಕರಿಗೆ ಸಿದ್ಧವಾದ ಪುಸ್ತಕಗಳೆಲ್ಲರಿಗೂ ಬೇಕಾದುದರಿಂದೀಗಲೇ ಒಂದು ಕಾರ್ಡು ಬರೆಯಿರಿ.

ಯಕ್ಷಗಾನ ವಾಮನಚರಿತ್ರೆ	... .	0–8–0
ಸೌಭದ್ರೆ ಕಲ್ಯಾಣ	... ...	0–6–0
ರತಿಕಲ್ಯಾಣ	... ...	0–6–0
ವೇದಾಂತ ಗಾಯತ್ರ್ಯರ್ಥಭಾಸ್ಕರ	... ...	0–10–0

ವಿಳಾಸ:—

ಮೂಲ್ಕಿ ಶ್ರೀನಿವಾಸಹರಿದಾಸ ಮಂಗಳೂರು

ವಿ. ಸೂ. ಈ ಮೇಲ್ಕಾಣುವ ಪುಸ್ತಕಗಳಲ್ಲದೆ ಇನ್ನೂ ಅವರಿಂದ ಪ್ರಕಟಿಸಲ್ಪಡುವವುಗಳೆಲ್ಲವೂ ಕೆಳಗಣ ವಿಳಾಸದಲ್ಲಿಯೂದೊರಕುವದು.

ಭಜಗೋವಿಂದ ಬುಕ್ ಡಿಪೋ

2] ಪೊಳಲಿ ದ. ಕನ್ನಡ.

ನೋಟೀಸು:—

ನಮ್ಮಲ್ಲಿ ಶಾಲಾವಿದ್ಯಾರ್ಥಿಗಳಿಗೆ ಅಗತ್ಯವಿರುವ ಎಕ್ಸರಸೈಜ್, ಮತ್ತು ಕೋಪಿ ಪುಸ್ತಕಗಳು, ಡ್ರೊಯಿಂಗ್ ಪುಸ್ತಕಗಳು, ಸ್ಟಿಪ್ ಕವರ್ ಬ್ಯಾಂಡಿಂಗ್, ವಿವಿಧ ನಮೂನೆಯ ಪುಸ್ತಕಗಳು, ವ್ಯಾಪಾರಸ್ಥರಿಗೆ ಬೇಕಾಗುವ ಲೆಖ್ಖದ ಪುಸ್ತಕಗಳು, ವಗೈರೆ ಯಾವಾಗಲೂ, ಮಾರಾಟಕ್ಕೆ ತಯಾರಿವೆ.

ಕೋರ್ಟುಫೋರ್ಮುಗಳು, ಗೇಣಿಚೀಟುಫೋರ್ಮುಗಳು, ಪರ್ಮಿಟು ಫೋರ್ಮುಗಳು, ಸಾಬೂನುಗಳು, ಸೆಂಟ್ಸುಗಳು ಇತ್ಯಾದಿ ಎಲ್ಲಾ ಕಟ್ಲೆರಿ ಸಾಮಾನುಗಳು ಸುಲಭ ದರದಲ್ಲಿ ಸಿಗುವವು.

ಶಾಲಾ ಉಪಯೋಗಾರ್ಥವಾದ ಪುಸ್ತಕಗಳೂ, ಕಥೆ ಪುಸ್ತಕಗಳೂ, ವೇದಾಂತ ಗ್ರಂಥಗಳೂ ಇವೆ.

ವಿಳಾಸ:—

ಕೆ. ಎಂ. ದಾಸ ಪ್ರಭು,
ರಥಬೀದಿ, ಮಂಗಳೂರು.

ಕನ್ನಡ ಲಿಪಿಯ ಪುಸ್ತಕಗಳು.

ದ್ವಾದಶಸ್ತೋತ್ರ	0 2 0 ಆಷ್ಟೆ	ಗೋಪಿಕಗೀತಾ	0 1 0 ಆಷ್ಟೆ
ಋಗ್ವೇದ ಸಂಧ್ಯಾವಂದನ	3 0	ಶ್ರೀರಾಘವೇಂದ್ರ ಸ್ತೋತ್ರಾದಿ	
ಯಜುರ್ವೇದ ಸಂಧ್ಯಾವಂದನ	4 0	ರಾಜಕವಚ	2 0
ಋಗ್ವೇದ ಬ್ರಹ್ಮಯಜ್ಞ ವಗೈರೆ	3 0	ಹರಿಕಥಾಮೃತಸಾರಮೂಲ	1 0
ದೇವಪೂಜಾ ಪದ್ಧತಿ	3 0	ಪುರಂದರ ದಾಸರ ಕೀರ್ತನೆ	2 0
ಪ್ರಾತರಾಹ್ನಿಕ ಪದ್ಧತಿ	3 0	೨ನೇ ಭಾಗ	6 0
ಅಭಿಷೇಕ ಸೂಕ್ತಗಳು	2 0	ಉದಯರಾಗ ೧ನೇ ಭಾಗ	4 0
ಶ್ರೀಸೂಕ್ತ ಪುರುಷಸೂಕ್ತ	1 0	ಲಕ್ಷ್ಮೀ ಶೋಭನ ಹಾಡು	2 0
ವಾಯುಸ್ತುತಿ	2 0	ತುಲಸಿಸಂಕೀರ್ತನೆ ಪದಗಳು	2 0
ವಿಷ್ಣುಸಹಸ್ರನಾಮ ಸ್ತೋತ್ರ	2 0	ಹರಿಭಕ್ತಿ ಸಾರ	1 0
ವಿಷ್ಣುಸಹಸ್ರನಾಮಾವಳಿ	2 0	ಉಡುಪಿ ಶ್ರೀಕೃಷ್ಣ ಚರಿತ್ರೆ	3 0
ದ್ವಾದಶದ್ವಾದಶನಾಮಸ್ತೋತ್ರ	1 6	ಸ್ವಪ್ನಪದ ಮಧ್ವನಾಮ	1 0
ಗಜೇಂದ್ರ ಮೋಕ್ಷ	1 6	ತುಳುಕನ್ಯೋಪದೇಶ	2 0
ಪಾಂಡವ ಗೀತಾ	1 6	ಆಚಾರದರ್ಪಣ	4 0

ಇವುಗಳಲ್ಲದೆ ಇನ್ನೂ ಅನೇಕ ಬಾಲಬೋಧ ಮತ್ತು ಕನ್ನಡ ಲಿಪಿಯ ಸಂಸ್ಕೃತ ಪ್ರಾಕೃತ ಪುಸ್ತಕಗಳೂ, ಶ್ರೀ ಮುದ್ರೆಗಳೂ ಪೂಜಾಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು

ವಿಳಾಸ:— **ಪಾವಂಜೆ ಗುರುರಾವ್**

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ ದ.ಕ.

5] ಈಪುಸ್ತಕಗಳು ಮಂಗಳೂರ ಶಾರದಾ ಪ್ರೆಸ್ಸಿನಲ್ಲಿಯೂ ದೊರೆವವು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು- ಸಿವಿಲ್, ಕ್ರಿಮಿನಲ್, ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು, ಹಾಗೆ ಹೇಳುವದನ್ನು ಅಂಗೀಕರಿಸುವದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ಧಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ, ಪೆನಲ್ ಕೋಡು ಕ್ರಿ. ಪ್ರೊ ಕೋಡು ಸಿವಿಲ್ ಪ್ರೊ. ಕೋಡ್ ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ಡ್ರೊಹವವಿವರಣೆ ಮತ್ತು ಲಿಮಿಟೇಷನ್ ಆಕ್ಟ್, ಸ್ಟ್ಯಾಂಪ, ಕೋರ್ಟಫೀ, ರಿಜಿಸ್ಟ್ರೇಷನ್ ಆಕ್ಟ್, ಹಿಂದೂ ಲಾ, ಪೊಡ್ಡಿ ಆಕ್ಟ್ ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, ಶ್ಯಾನು ಪಟೇಲರಕೋಡ್ ಗ್ರಾಮಮುನಸೀಫ್ ಕೋರ್ಟ್ ಕೋಡ್ ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತೈವಜುಗಳ 40 ತರದ ನಮೂನೆಗಳು ಇದರಲ್ಲಿದೆ. ಬೆಲೆ 1-8-0 ವಿ· ಪಿ. 1-12-0.

ಯಂ. ಯಸ್. ಸಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು.

9] 11ಪ್ರತಿಗಳನ್ನು ಒಟ್ಟಾಗಿ ತರಿಸಿಕೊಂಡರೆ ಬೆಲೆ 15 ರೂ. ಮಾತ್ರ.

ಆತಂಕನಿಗ್ರಹ ಗುಳಿಗೆಗಳು.

ಅಯ್ಯಾ ವಾಚಕಮಹಾಶಯರೇ,—

ತಾವು ಅತಿ ಉತ್ತಮ ದೇಹದಿಂದ ಪ್ರಕಾಶಿಸು ವಿರಾಗಬೇಕಾದರೆ, ಪ್ರಸ್ತುತದಲ್ಲಿ ಹಾಗು ತಮ್ಮ ದೇಹ ದಲ್ಲಿರುವ ಅನೇಕ ರೋಗಗಳನ್ನು ಹೋಗಲಾಡಿಸುವ ಪ್ರಯತ್ನಪಡಬೇಕು. ಅಂಥಾ ಪ್ರಯತ್ನಗಳು ಹಾಗು ಉತ್ತಮವಾದ ಔಷಧವನ್ನು ಸೇವಿಸುವಲ್ಲಿ ಗುಣ ಹೊಂದುವಿರಿ. ಅದಕ್ಕಾಗಿಯೇ—

ಆತಂಕನಿಗ್ರಹ ಗುಳಿಗೆಗಳನ್ನು

ಹಗಲಿರುಳೂ ಪ್ರಿಯಬಾಂಧವನಾಗಿ ಮಾಡಿ ಸೇವಿಸು ವಲ್ಲಿ ಉತ್ತಮರಾಗುವಿರಿ.

ಕ್ರಯ ೩೨ ಗುಳಿಗೆಗಳಿಗೆ ರೂ. ೧—೦—೦.

ವಿಳಾಸ:— ಮೈಸೂರು ಏಜಂಟರು:—

ಮ| ಯಂ. ಸಿ. ಪದ್ಮನಾಭಯ್ಯಂಗಾರ್ಯರವರು,

ದಿ. ಚಾಂಪಿಯನ್ ಅಥಲ್ಟಿಕ್ ಏಜನ್ಸಿ ಮೈಸೂರು

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

11] ಆತಂಕನಿಗ್ರಹ ಔಷದಾಲಯ, 157 ಬ್ರಾಡ್ವೇ, ಮದರಾಸ.

ತ್ವರೆಮಾಡಿರಿ! ಒಳ್ಳೆಯ ಸಮಯ. ತ್ವರೆಮಾಡಿರಿ!!

ಪೂರ್ವಾರ್ಧ ಪ್ರತಿಪದಟೀಕಾ ತಾತ್ಪರ್ಯ ಸಹಿತ.

ಕನ್ನಡ ಜೈಮಿನೀ ಭಾರತವು.

ಈ ಗ್ರಂಥದ ಪೂರ್ವಭಾಗವೆಂಬ ಪುಸ್ತಕವು ಮೈಸೂರು ಆಸ್ಥಾನದ ಪಂಡಿತರಾದ ಮತ್ತು ಮಹಾರಾಜ ಕಾಲೇಜು ಸೀನಿಯರ್ ಪಂಡಿತರಾದ 'ವೇ. ಪಿ. ಆರ್ ಕರಿಬಸವ ಶಾಸ್ತ್ರಿಗಳಿಂದ' ಪರಿಶೋಧಿಸಲ್ಪಟ್ಟು ಮೊದಲು ದಪ್ಪಕ್ಷರದ ತುಂಡು ಪಙ್ತ್ತಿಯಲ್ಲಿ ಮೂಲವೂ, ಅದರ ಕೆಳಗಡೆ ದೊಡ್ಡ ಪಂಙ್ತ್ತಿಯಲ್ಲಿ ಪ್ರತಿಪದಟೀಕೆಯೂ, ಅದರಡಿಯಲ್ಲಿ ತಾತ್ಪರ್ಯವೂ, ವಿಶೇಷ ವಿಷಯಗಳೂ, ಬರಿಯಲ್ಪಟ್ಟಿವೆ. ಈ ಪುಸ್ತಕವು ಹಸನಾದಕಾಗದದಲ್ಲಿ ಸುಂದರವಾದ ಸ್ಫುಟಾಕ್ಷರಗಳುಳ್ಳದ್ದಾಗಿದೆ. ಸಾಧಾರಣವಾಗಿ ಈ ಟೀಕೆಯನ್ನು ಓದುವವರಿಗೆ ಇದರ ವಿಷಯವಾಗಿ ಇತರರಿಂದ ತಿಳಿದುಕೊಳ್ಳಬೇಕಾದ ಅಂಶವೇ ಇರುವುದಿಲ್ಲ. ಇದರ ಕ್ರಯ ರೂ. 3-0-0. ಮಾತ್ರ.

ಕನ್ನಡ ಮಹಾಭಾರತವು.

ಇದು ಮೇಲ್ಕಂಡ 'ಕರಿಬಸವ' ಶಾಸ್ತ್ರಿಗಳಿಂದ ಶೋಧಿಸಲ್ಪಟ್ಟು ಅದರಂತೆಯೇ ಹಸನಾದ ಕಾಗದದಲ್ಲಿ [12

ಸುಂದರವಾದ ಸ್ಫುಟಾಕ್ಷರಗಳಿಂದ ಅಂದರೆ ಎಲ್ಲವೂ ದೊಡ್ಡಕ್ಷರದಿಂದಲೇ ಭಾಮಿನೀ ಷಟ್ಪದಿ ಪದ್ಯರೂಪ ಅಚ್ಚು ಹಾಕಿಸಿ ಇದೆ. ಈ ಶ್ರೇಷ್ಠವಾದ ಗ್ರಂಥವನ್ನು ಓದುವುದರಿಂದ ಇಹಪರಗಳಲ್ಲಿಯೂ, ಸೌಖ್ಯವುಂಟಾಗುವುದೆಂಬ ವಿಷಯವು ಭಾರತೀಯರೆಲ್ಲರಿಗೂ ತಿಳಿದೇ ಇರುವುದರಿಂದ ನಾವು ಸ್ತುತಿಸಿ ಪ್ರಯೋಜನವೇನು ? ತ್ವರೆಮಾಡಿರಿ! ಇಂಥ ದೊಡ್ಡ ಗ್ರಂಥವು ಎಲ್ಲಿಯೂ ಪ್ರಿಂಟಾಗಿಯೇ ಇಲ್ಲ. ಪ್ರತಿಯೊಬ್ಬರಲ್ಲಿಯೂ ಇರತಕ್ಕದು. ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಕ್ರಯ ರೂ. 3-0-0. ಇವುಗಳಲ್ಲದೆ ರಾಜಶೇಖರ ವಿಲಾಸ: 1-0-0. ಶಬರ ಶಂಕರ ವಿಲಾಸ 0-8-0. ಪ್ರಹ್ಲಾದ ಚರಿತ್ರೆ 0-10-0. ಮತ್ತು ಪಾರಾಯಣಕ್ಕೆ ಅನುಕೂಲವಾದ 'ಸುಂದರಕಾಂಡ ರಾಮಾಯಣ' ಅವ್ವಲ್ 1-0-0. ಡಿಟೊ ದುಯಂ 0-8-0. ಇವೂ ಮೇಲ್ಕಂಡವರಿಂದ ಶೋಧಿಸಲ್ಪಟ್ಟದ್ದು. ನಮ್ಮ ಕೆಟಲಾಗನ್ನು ಅಪೇಕ್ಷಿಸುವವರು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. ನಮ್ಮ ವಿಳಾಸ:—

B. A. Kothanda Rama,

Book Depot, **Mysore.**

ಬಿ. ಎ. ಕೋದಂಡರಾಮ,

 ಬುಕ್ ಡಿಪೋ, ಮೈಸೂರು.

ಕನ್ನಡ ಗ್ರಂಥಗಳು.

	ರೂ.	ಆ.		ರೂ.	ಆ.
ದ್ವಾದಶಸ್ಕಂದ ಭಾಗವತ	4	0	ತೊರವೆ ರಾಮಾಯಣ ಅವ್ವಲ್	1	8
ದಶಮಸ್ಕಂದ ಭಾಗವತ	1	8	ದುಯ್ಯಂ.	1	0
18 ಪರ್ವ ಮಹಾಭಾರತ	3	8	ರಾಮಾಯಣ ಕಥಾಸಂಗ್ರಹ	0	12
ದಶಪರ್ವ ಭಾರತ	2	0	ಜೈಮುನಿ ಕಥಾಸಂಗ್ರಹ	0	12
ಅಷ್ಟಪರ್ವ ಭಾರತ	1	0	18 ಪರ್ವ ವಚನಭಾರತ ಕಥಾಸಂಗ್ರಹ	0	8
ಸಟೀಕ ಜೈಮುನಿ ಭಾರತ	4	0	ಸಟೀಕ ಭಗವದ್ಗೀತೆ	0	8
ಡಿಟೊ ಮೂಲ	0	12	ಸಟೀಕ ತ್ರಿಕಾಂಡ ಅಮರ	0	12
			ಬ್ರಹ್ಮತ್ಕಥಾ ಮಂಜರಿ	0	12

ಇವುಗಳಲ್ಲದೆ ಬೇರೆ ಅನೇಕ ಗ್ರಂಥಗಳು ವೇದಾಂತ, ನಾಟಕೆ, ಜ್ಯೋತಿಷ್ಯ, ವೈದ್ಯ, ಯಕ್ಷಗಾನ, ಮೊದಲಾದ ಗ್ರಂಥಗಳು, ಮೈಸೂರು ಸುಗಂಧ ದ್ರವ್ಯಗಳು, ಅಮೃತಾಂಜನ ಮೊದಲಾದ ಪೇಟೆಂಟ್ ಔಷಧಿಗಳು ವಗೈರೆ ಎಲ್ಲಾ ನಮೂನೆ ಸಾಮಾನುಗಳು ಕಡಮೆ ಕ್ರಯದಲ್ಲಿ ಮಾರಲ್ಪಡುತ್ತವೆ. ಟಪ್ಪಾಲು ಖರ್ಚು ಬೇರೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ದಿ. ಜನರಲ್ ಟ್ರೇಡಿಂಗ್ ಏಜನ್ಸಿ, ವಿಟ್ಲ, ದಕ್ಷಿಣ ಕನ್ನಡ. 14

ವಿನಾಮೂಲ್ಯ !   ವಿನಾಮೂಲ್ಯ !!

ಆರ್ಷ ಚಿಕಿತ್ಸಾರಹಸ್ಯ.

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯ ದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥ ದಿಂದ ಸಮ ವ್ಯಕ್ತವಾಗುವದು. ಕನ್ನಡ ನುಡಿಯ ಒಡ ನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯ ಮಹಾಶಯರೇ, ಆರ್ಷಚಿಕಿತ್ಸೆಯಲ್ಲಿ ಗೌರವ ಮತ್ತು ಅಭಿಮಾನವನ್ನು ತೋರಿಸಿ ತ ಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ವಿ ಳಾಸವನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರಿ ಯುವದು.

ಎಂ. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ, ಮಂಗಳೂರು. [18

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯುಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕ ಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 24 ರೂ. ತೂಕ ಶೇರು 1ಕ್ಕೆ ರೂ. 12-0-0, 5-0-0, 3-0-0, 2-8-0. 1-4-0, 1-0-0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2-0-0, 1-0-0. 0-12-0, 0-6-0 ಸುಗಂಧಿ ಕಾರ್ಡು 1ಕ್ಕೆ 0-1-0 ಬಾಲಗ್ರಹ ದೂಪ ಟಿನ್ 1ಕ್ಕೆ 0-8-0. ಸುವಾಸನೇ ಸುಣ್ಣ ಶೀಸೆ 1ಕ್ಕೆ 0-2-0. ಇದಲ್ಲದೆ ಇನ್ನು ಅನೇಕ ತರದ ಸೆಂಟ್ಸು, ಸುಗಂಧ ದ್ರವ್ಯಗಳು ಮೊದಲಾದ ಸಾಮಾನುಗಳು ಸಹ ಇರುತ್ತವೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್,

21] ಸುಗಂಧಕಾರಿ, ಮೈಸೂರು.

ತಿದ್ದುಪಡಿ.

ತಪ್ಪು.	ಒಪ್ಪು.	ಪುಟ.	ಪಂಕ್ತಿ.
ಡುಕ್ಕ ಇಾಕರಣೆ	ಡುಕುರುಙ್ಕರಣೆ	೧	೮
ಡುಕುರಿಂಕರಣ	ಡುಕುರುಂಕರಣ	೨	೮
ಭಂಗಿಸೆದರ	ಭಂಗಿಸದರ	೨	೧೬
ಯುನ್ನೆನಸುತ್ತಿಹ ಪರಗತಿ ಸಂತೆ	ಇನ್ನೆಣ್ಣೆಪರಾ ಪರಾಗತಿ ಮುಂತೆ	೩	೪
ಬಳ್ಳಿ	ಬಳ್ಳಿ	೧೨	೩
